ರೈತರಿಗೆ ಆಗುವ ತೊಂದರೆಯ ನಿವಾರಣೆಗಾಗಿ ಆದಷ್ಟು ಜಾಗ್ರತೆ ಆ ವಿತರಣಾ ಟ್ರಾನ್ಸಫಾರ್ಮರನ್ನು ಒಳ್ಳೆಯ ವಿತರಣಾ ಟ್ರಾನ್ಸಫಾರ್ಮರ್ ಮೂಲಕ ಬದಲಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಲ್ಲದೇ ವಿತರಣಾ ಟ್ರಾನ್ಸಫಾರ್ಮರಗಳ ವಿಫಲತೆಯನ್ನು ತಡೆಗಟ್ಟಲು ಎಲ್.ಟಿ.ಫ್ಯೂಸ್ ಕಿಟಗಳನ್ನು ಸಹ ಈಗ ಅಳವಡಿಸಲಾಗುತ್ತಿದೆ.

ಊ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿತರಣಾ ಟ್ರಾನ್ಸಫಾರ್ಮರಗಳ ವಿಫಲತೆ ಬಗ್ಗೆ ತೀವ್ರ ಗಮನವನ್ನು ಹರಿಸಿದ್ದು, ವಿಫಲತೆಯನ್ನು ತಡೆಗಟ್ಟುವ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಅಗತ್ಯ ಮಾರ್ಗದರ್ಶನಗಳನ್ನು ನೀಡಿದೆ. ಮಂಡಳಿಯ ಮಾರ್ಗದರ್ಶನಗಳನ್ನು ಪಾಲಿಸದ ಕ್ಷೇತ್ರಾಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಎಚ್ಚರಿಸಲಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳು

2133 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯಲ್ಲಿ ಕಾರ್ಯ ಮಾಡುವ ನ್ಯಾಯಾಲಯಗಳು ಸಂಖ್ಯೆ ಎಷ್ಟು ? ಅವುಗಳ ಮುಂದಿರುವ ಮೊಕದ್ದಮೆಗಳೆಷ್ಟು ? ಅವುಗಳ ಮುಂದಿರುವ ಮೊಕ್ಕದ್ದಮೆಗಳೆಷ್ಟು ?

ಆ) ನ್ಯಾಯಾಲಯಗಳ ಮುಂದೆ ಇರುವ ವ್ಯಾಜ್ಯಗಳು ಬೇಗನೆ ಮುಗಿಯದೇ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಅನೇಕ ವರ್ಷಗಳಿಂದ ನ್ಯಾಯಾಲಯಗಳ ಮುಂದೆ ಬಿದ್ದಿರುವ ಪ್ರಕರಣಗಳಿಂದ ಜನ ಮುಂದೆ ಬಿದ್ದಿರುವ ಪ್ರಕರಣಗಳಿಂದ ಜನ ಸಾಮಾನ್ಯನಿಗೆ ನ್ಯಾಯ ವಿಳಂಭದಿಂದ ನ್ಯಾಯ ತಿರಸ್ಕರಿಸಿದಂತಾಗುವುದಿಲ್ಲವೆ.

ಈ) ಇಂತಿಂತ ಪ್ರಕರಣಗಳಲ್ಲಿ ನ್ಯಾಯಾಲಯದ ತೀರ್ಪು ನಿರ್ದಿಷ್ಟ ಅವಧಿಯೊಳಗೆ ತೀರ್ಪು ನೀಡುವಂತೆ ಸರಕಾರ ನಿಯಮವನ್ನಾದರೂ ತರುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆಯೇ,

ಉ) ಇದ್ದಲ್ಲಿ ಯಾವಾಗ (ಸಂಪೂರ್ಣ ವಿವರ ನೀಡುವುದು)

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 30. ದಿನಾಂಕ 31ನೇ ಆಗಸ್ಟ್ 1995ರಲ್ಲಿ ಇದ್ದಂತೆ 40,990 ಮೊಕದ್ದಮೆಗಳು (ಸಿವಿಲ್ ಮತ್ತು ಕ್ರಿಮಿನಲ್).

ಆ) ನ್ಯಾಯಾಲಯಗಳ ಮುಂದೆ ಬಾಕಿ ಇರುವ ವ್ಯಾಜ್ಯಗಳು ಬೇಗನೆ ಮುಗಿಯದಿದ್ದರೆ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುವುದನ್ನು ಮನಗಂಡು ವ್ಯಾಜ್ಯಗಳನ್ನು ಬೇಗನೆ ಮುಗಿಸಿ ಈ

ತೊಂದರೆಯನ್ನು ನಿವಾರಿಸಲು ಮೊಕದ್ದಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವ ಸ್ಥಳಗಳಲ್ಲಿ ಹೊಸ: ಅಧಿಕ ನ್ಯಾಯಾಲಯಗಳನ್ನು ಸ್ಥಾಪಿಸುವುದು, ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು, ನ್ಯಾಯಾಧೀಶರಿಗೆ ಮೊಕದ್ದಮೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅವಶ್ಯವಿರುವ ಸವಲತ್ತುಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ದಿಕ್ಕಿನಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಪೈಲೆಟ್ ಪ್ರಾಜೆಕ್ಟ ಯೋಜನೆಯಡಿಯಲ್ಲಿ ಆರು ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

ಇ) ಪ್ರಕರಣಗಳನ್ನು ಇಂತಿಷ್ಟೆ ಕಾಲದಲ್ಲಿ ತೀರ್ಮಾನಿಸಲು ಯಾವುದೇ ಕಾಲಮಿತಿ ಹಾಕಿಕೊಂಡಿಲ್ಲ. ಈ ದಿಕ್ಕಿನಲ್ಲಿ ನಿಯಮಾವಳಿಯನ್ನು ರೂಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಜಾಪುರ - ಗುಲ್ಬರ್ಗಾ ರಸ್ತೆ ಕುರಿತು

2134 - ಶ್ರೀ ಬಸವನಗೌಡ ಪಾಟೀಲ್ (ವಿಜಾಪರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಗುಲ್ಬರ್ಗಾ ರಸ್ತೆ ತೀವ್ರ ಹದೆಗಟ್ಟಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹುಬ್ಬಳ್ಳಿಯಿಂದ ಅಂಕೋಲಾ ರಸ್ತೆಯ ಮಾದರಿಯಂತೆ ಬೆಳಗಾಂವ ವಿಜಾಪುರ ಹೈದ್ರಾಬಾದ್ ರಸ್ತೆಯನ್ನು ವಿಶೇಷ ಯೋಜನೆಯಲ್ಲಿ ತೆಗೆದುಕೊಂಡು ಈ ರಸ್ತೆಯನ್ನು ನಿರ್ಮಿಸಲು ಸರಕಾರ ಕ್ರಮ ಕೈಗೊಳ್ಳುವುದೇ,

ಇ) ಈ ನಿಟ್ಟಿನಲ್ಲಿ ಸರಕಾರದ ಉದ್ದೇಶವೇನು?

ಶ್ರೀ ಶಿವನಾಂದ ಹೆಚ್.ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಿಜಾಪುರ-ಗುಲ್ಬರ್ಗಾ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು ಸುಗಮ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇಂತಹ ಪ್ರಸ್ತಾಪ ಇರುವುದಿಲ್ಲ.

ಇ) ಸದರಿ ರಸ್ತೆಯನ್ನು ಲಭ್ಯ ಮಾಡಿರುವ ಅನುದಾನದಲ್ಲಿ ಸೂಕ್ತವಾಗಿ ನಿರ್ವಹಣೆಮಾಡಬೇಕೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ರಾಷ್ಟ್ರೀಯ ನೀರು ಪೂರೈಕೆ ಯೋಜನೆ ಕುರಿತು.

2135 - ಶ್ರೀ ಯು.ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?